**ಸಿವಿಲ್ ಜಡ್ಜ್ ಮತ್ತು ಜೆಎಂಎಫ್ ಸಿ ನ್ಯಾಯಾಲಯ ಪೊನ್ನಂಪೇಟೆ.**

**ಸಿ.ಸಿ.ಸಂಖ್ಯೆ.371/2020**

ಫಿರ್ಯಾದುದಾರು : ದಿ. ಮರ್ಚೆಂಟ್ಸ್ ಕ್ರೆಡಿಟ್ ಕೋ
ಆಪರೇಟೀವ್ ಸೊಸೈಟಿ ಲಿ.,
ಶ್ರೀಮಂಗಲ ಶಾಖೆ, ವಿರಾಜಪೇಟೆ ತಾಲ್ಲೂಕು,
ಕೊಡಗು ಜಿಲ್ಲೆ.
ಪ್ರತಿನಿಧಿಸುವವರು, ವ್ಯವಸ್ಥಾಪಕರು
ಶ್ರೀ ಕಿರಣ್ ಬಿ.ಇ, ತಂದೆಃ ಪೌತಿ ಈಶ್ವರ,
ಪ್ರಾಯಃ 43 ವರ್ಷ, ಅಕೌಂಟೆಂಟ್.

**---ವಿರುದ್ಧ –**

ಆರೋಪಿ : ಶ್ರೀ ದರ್ಶನ್ ಟಿ.ಎನ್,
ತಂದೆಃ ಟಿ.ಟಿ.ನಂಜಪ್ಪ, ಮೇಜರ್,
ವಾಸಃ ಪೂಜೆಕಲ್ಲು, ಕುಟ್ಟ ಅಂಚೆ,
ಕುಟ್ಟ, ಎಸ್.ಕೊಡಗು.

**ಆರೋಪಿಯಾದ ನಿಮ್ಮ ವಿರುದ್ಧ ಇರುವ ಆಪಾದನೆ ಏನೆಂದರೆ**

ಏನೆಂದರೆ ಆರೋಪಿಯಾದ ನೀವು ಫಿರ್ಯಾದಿ ಬ್ಯಾಂಕಿನಿಂದ ದಿಃ**25.06.2018** ರಂದು ಪಿಗ್ಮಿ ಓಡಿ ಲೋನ್ ಯೋಜನೆ ಅಡಿಯಲ್ಲಿ ರೂ. **50,000/-** ಹಣವನ್ನು ಸಾಲವಾಗಿ ಪಡೆದಿದ್ದು, ಸದರಿ ಸಾಲದ ಹಣವನ್ನು ನಿಗದಿತ ಸಮಯದಲ್ಲಿ ತೀರಿಸದೆ, ಸದರಿ ಸಾಲದ ಹಣವು ಬಡ್ಡಿ ಸಮೇತ ರೂ.**70,500/-** ಆಗಿದ್ದು, ನಂತರ ಪಿರ್ಯಾದುದಾರರು ಸಾಲವನ್ನು ಮರುಪಾವತಿಸುವಂತೆ ಕೇಳಿದಾಗ ಆರೋಪಿಯಾದ ನೀವು ನಿಮ್ಮ ವಿಜಯ ಬ್ಯಾಂಕ್, ಬಾಡಗ ಶಾಖೆಯ **167235** ಸಂಖ್ಯೆಯ ಚೆಕ್ ಅನ್ನು ಸಾಲದ ಬಾದ್ಯತೆಗಾಗಿ ನೀಡಿದ್ದು, ನಂತರ ದಿಃ**18.01.2020** ರಂದು ಪಿರ್ಯಾದಿದಾರರು ಸದರಿ ಚೆಕ್ ಅನ್ನು ನಗದೀಕರಣಕ್ಕಾಗಿ ತಮ್ಮ ಬ್ಯಾಂಕಿಗೆ ಹಾಜರು ಪಡಿಸಿದಾಗ ಸದರಿ ಬ್ಯಾಂಕಿನವರು **"Insufficient Funds"** ಎಂದು ಹಿಂಬರಹ ನೀಡಿರುತ್ತಾರೆ. ನಂತರ ಪಿರ್ಯಾದುದಾರರು ತಮ್ಮ ವಕೀಲರ ಮುಖಾಂತರ **15** ದಿನಗಳೊಳಗೆ ಚೆಕ್ ಹಣವನ್ನು ಹಿಂದಿರುಗಿಸುವಂತೆ ದಿ.**04.02.2020** ರಂದು ಕಾನೂನು ರೀತಿಯ ನೋಟೀಸನ್ನು ನೀಡಿದ್ದರೂ ಸಹ ನೀವು ಚೆಕ್ ಮೊತ್ತವನ್ನು ನಿಗದಿತ ಸಮಯದಲ್ಲಿ ಪಿರ್ಯಾದುದಾರರಿಗೆ ಕೊಡದೇ ಮೋಸ ಮಾಡಿದ್ದು, ಇದು ವ್ಯವಹರಣೀಯ ಲಿಖಿತಗಳ ಅಧಿನಿಯಮ ಕಲಂ **138** ರಡಿಯಲ್ಲಿ ಶಿಕ್ಷಾರ್ಹವಾದ ಅಪರಾಧವಾಗಿದ್ದು, ಈ ನ್ಯಾಯಾಲಯದ ವಿಚಾರಣಾಧಿಕಾರ ವ್ಯಾಪ್ತಿಯಲ್ಲಿ ಮಾಡಿರುವುದಾಗಿ ಆರೋಪಿಸಲಾಗಿದೆ.

**ಆರೋಪಿಯ ಹೇಳಿಕೆ**

1. ಪ್ರಶ್ನೆ - ಇದೀಗ ಓದಿ ಹೇಳಿದ ಆರೋಪಣೆಯು ನಿಮಗೆ ಅರ್ಥವಾಯಿತೆ ?

ಉತ್ತರಃ ಅರ್ಥವಾಯಿತು

2. ಪ್ರಶ್ನೆ - ನೀವು ನಿಮ್ಮ ತಪ್ಪನ್ನು ಒಪ್ಪಿಕೊಳ್ಳುವಿರಾ ಅಥವಾ ವಿಚಾರಣೆ ಬಯಸುವಿರಾ?

ಉತ್ತರಃ ತಪ್ಪು ಮಾಡಿಲ್ಲ, ವಿಚಾರಣೆಯಾಗಬೇಕು

(ಮೇಲ್ಕಂಡ ಎಲ್ಲಾ ಆಪಾದನೆಗಳನ್ನು ದಿಃ26.11.2025 ರಂದು ಆರೋಪಿಗೆ ನನ್ನ ಸಮಕ್ಷಮ ಓದಿ ಹೇಳಿ ಅವರ ಹೇಳಿಕೆಯನ್ನು ಪಡೆದುಕೊಂಡು ಸತ್ಯವಾಗಿದೆ ಎಂದು ದೃಢೀಕರಿಸುತ್ತೇನೆ).

**sd/-**
**ಸಿವಿಲ್ ಜಡ್ಜ್ ಮತ್ತು ಜೆ.ಎಂ.ಎಫ್.ಸಿ.**
**ನ್ಯಾಯಾಲಯ, ಪೊನ್ನಂಪೇಟೆ,**